ಕರ್ನಾಟಕ ಸರ್ಕಾರ

ಸಂಖ್ಯೆ. ಆರ್‌ಡಿ 1 ಎಲ್‌ಆರ್‌ಎ 86

ಕರ್ನಾಟಕ ಸರ್ಕಾರದ ಸಚಿವಾಲಯ,
3ನೇ ಹಂತ, 6ನೇ ಮಹಡಿ, ಬಹು ಮಹಡಿಗಳ ಕಟ್ಟಡ,
ಬೆಂಗಳೂರು, ದಿನಾಂಕ: 11-2-86.

(102)

## ಸುತ್ತೋಲೆ

ವಿಷಯ: ಭೂ.ಸು – ಭೂ ನ್ಯಾಯ ಮಂಡಳಿಗಳು ಹಾಗು ಭೂ ಸುಧಾರಣಾ ಅಪೀಲು ಪ್ರಾಧಿಕಾರಗಳಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಉಪಯೋಗಿಸುವ ಕುರಿತು.

ದಿನಾಂಕ 29-10-1985 ರಂದು ನಡೆದ ಕನ್ನಡ ಕಾವಲು ಮತ್ತು ಗಡಿ ಸಲಹಾ ಸಮಿತಿಯ ಸಭೆಯಲ್ಲಿ ಕಂದಾಯ ಇಲಾಖೆಯ ನ್ಯಾಯಾಂಗ ಮಂಡಳಿಗಳಲ್ಲಿ ಕನ್ನಡವನ್ನೇ ಕಡ್ಡಾಯವಾಗಿ ಆಡಳಿತ ಭಾಷೆಯಾಗಿ ಬಳಸುವಂತೆ ಆದೇಶ ಹೊರಡಿಸಲು ಸೂಚಿಸಿ ಶಿಫಾರಸ್ಸು ಮಾಡಲಾಗಿದೆ.

ಕರ್ನಾಟಕ ಏಕೀಕರಣವಾದ 30 ವರ್ಷಗಳ ನಂತರವೂ ಜನಸಾಮಾನ್ಯರ ಆಗುಹೋಗುಗಳ ನೇರ ಜವಾಬ್ದಾರಿ ಹೊಂದಿರುವ ಇಲಾಖೆಯಾದ ಕಂದಾಯ ಇಲಾಖೆಯಲ್ಲಿ ಕನ್ನಡವನ್ನು ಆಡಳಿತ ಭಾಷೆಯಾಗಿ ಬಳಸುವಂತೆ ಪದೇಪದೇ ಸುತ್ತೋಲೆ ಕಳಿಸುವುದು ಸಮಂಜಸವಾಗಿರುವುದಿಲ್ಲ. ಆದುದರಿಂದ, ಇನ್ನು ಮೇಲೆ ಕಂದಾಯ ಇಲಾಖೆಯಲ್ಲಿ ಭೂ ಸುಧಾರಣೆಗೆ ಸಂಬಂಧಿಸಿದಂತೆ ಎಲ್ಲಾ ವ್ಯವಹಾರವನ್ನೂ ಕನ್ನಡದಲ್ಲಿಯೇ ನಡೆಸಬೇಕು ಹಾಗು ಆಡಳಿತ ಭಾಷೆಯಾಗಿ ಕನ್ನಡವನ್ನೇ ಕಡ್ಡಾಯವಾಗಿ ಬಳಸಬೇಕು ಎಂದು ಈ ಮೂಲಕ ಸಾದರಪಡಿಸಲಾಗಿದೆ. ಜಿಲ್ಲೆಯ ಜಿಲ್ಲಾಧಿಕಾರಿಗಳು, ಜಿಲ್ಲಾಧಿಕಾರಿಗಳ ಕಚೇರಿಯಲ್ಲಿ, ಭೂ ನ್ಯಾಯ ಮಂಡಳಿಗಳಲ್ಲಿ, ಭೂ ಸುಧಾರಣಾ ಅಪೀಲು ಪ್ರಾಧಿಕಾರಗಳಲ್ಲಿ ಹಾಗು ಭೂ ಸುಧಾರಣೆಗೆ ಸಂಬಂಧಿಸಿದ ಎಲ್ಲಾ ವ್ಯವಹಾರಗಳಲ್ಲಿ ಕನ್ನಡವೇ ಆಡಳಿತ ಭಾಷೆಯಾಗಿ ಸಮರ್ಪಕವಾಗಿ ಬಳಕೆಯಾಗುತ್ತಿರುವ ಬಗ್ಗೆ ದೃಢಪಡಿಸಿಕೊಂಡು, ಆ ಬಗ್ಗೆ, ಮಾಸಿಕ ವರದಿಯನ್ನು ಸರ್ಕಾರಕ್ಕೆ ಕಳುಹಿಸಬಹುದಾಗಿದೆ.

11/2/86

(ಎನ್. ಅಶೋಕ್)
ಭೂಸುಧಾರಣಾ ವಿಶೇಷಾಧಿಕಾರಿ ಮತ್ತು ಪದನಿಮಿತ್ತ
ಸರ್ಕಾರದ ಅಧೀನ ಕಾರ್ಯದರ್ಶಿ, ಕಂದಾಯ ಇಲಾಖೆ.

ಗೆ,

1. ಎಲ್ಲಾ ವಿಭಾಗಾಧಿಕಾರಿಗಳು.
2. ಎಲ್ಲಾ ಜಿಲ್ಲಾಧಿಕಾರಿಗಳು / ವಿಶೇಷ ಜಿಲ್ಲಾಧಿಕಾರಿಗಳು.
3. ಎಲ್ಲಾ ಉಪ ವಿಭಾಗಾಧಿಕಾರಿಗಳು.
4. ಎಲ್ಲಾ ತಹಶೀಲ್ದಾರ್/ವಿಶೇಷ ತಹಶೀಲ್ದಾರರು.
5. ಎಲ್ಲಾ ಭೂಸುಧಾರಣಾ ಅಪೀಲು ಪ್ರಾಧಿಕಾರಗಳಿಗೆ, ಜಿಲ್ಲಾಧಿಕಾರಿಗಳ ಮುಖಾಂತರ.